
## ಕವಿತೆ



**ಅಕ್ಷಯ ಕಾಂತಬೈಲು**

ಕಲೆ: ಎಸ್.ವಿ. ಹೂಗಾರ್



# ಜನ್ಮದ ಜನ್ಮ

ಹಗಲು ನೀನು ಒಂದಲ್ಲಾವೊಂದು
ಸೂರ್ಯನ ನುಂಗುವ ಕಾರಣ
ರಾತ್ರಿ ನಿನ್ನ ಚರ್ಮದ ಕೋಶಗಳು
ಮುಂಜಾವಿನ ತನಕ ಒಂದರಮೇಲೊಂದು
ಚಂದ್ರರ ಉತ್ಪತ್ತಿಸುತ್ತಿರುತ್ತವೆ!

ಕಪ್ಪು ಹಿನ್ನಲೆಯೊಳಗೆ ತೀರ ತಂಪು ಆವರಣದಲ್ಲಿ
ನಿನ್ನ ದೇಹದ ದಿಕ್ಕು ಚಲಿಸುವಾಗ
ಮನಸಿಗೆ ಬಂದ ಆತ್ಮಗಳು ಸಂತ ಭಾವದಲ್ಲಿ ವಿರಾಮ!

ಗಾಢತೆ ಅಂಕೆಗೆ ನಿಲುಕುತ್ತಿದ್ದಂತೆ
ನಾಳೆಯ ಬೆಳಗ ನೆನೆದು
ಬಳಿಯ ಎದೆಯ ಮಟ್ಟನ್ನೂ
ತೊಡೆಯ ಉಬ್ಬನ್ನೂ ಮತ್ತಷ್ಟು ತಡವಿ
ಇನ್ನೂ ಆಳಕ್ಕೆ ಕಿಂಡಿಕೊರೆಯಲು
ನಿನ್ನ ಕೈ ಕಾಲಿನ ಉಗುರುಗಳು ಮತ್ತಷ್ಟೂ
ಉದ್ದ ಬೆಳೆದು ಬಣ್ಣಗಳಿಂದ ವಿಜೃಂಭಿಸುತ್ತವೆ!

ಯೋಚನೆ, ಯೋಜನೆ ಸತಾಯಿಸುತ್ತಾ
ಬದುಕಲು ಪುಸಲಾಯಿಸುತ್ತಾ
ಜೀವವ ಜಗ್ಗುವುದರಲ್ಲಿ
ಕೂದಲು ಚರ್ಮಕ್ಕೆ ವಿದಾಯ ತಿಳಿಸಿ
ಅಂಟಿದ್ದ ಗುರುತು ಕೂಡ ಇರದಂತೆ
ಮಣ್ಣಿನ ಮೇಲೆ ಪುಟಿಯುತ್ತದೆ!